# ಅಮೇರಿಕ ಕನ್ನಡ ಕೂಟಗಳ ಆಗರ (ಅಕ್ಕ)

## Association of Kannada Kootas of America (AKKA)

Not-for-Profit Tax ID: 59-3527607 www.akkaonline.org

**AKKA Executive Committee**

**President**
Ramesh Gowda, MI - 248-377-2727

**Secretary**
Shantharaju Kempaiah, MI - 248-477-7117

**Treasurer**
Harish Hiremath, MD - 301-360-9951

**Vice Presidents**
Dr. Shekar Sastry, TN - 615-377-8888
Suresh Ramachandran, MD - 301-762-4394
Vasanthi Gowda, IL - 630-963-0923

**Jt. Secretaries**
Mohan Cadaba, NJ - 732-593-8060
Vanita Harish, WV - 304-925-8070

**Jt. Treasurers**
Dayashankar Adappa, MI - 248-471-6861
Prabhu Dev, CA - 408-517-9027

**Chairman, Board of Trustees**
Amarnath Gowda – 248-894-3177

**Immediate Past President**
Dr. Kudur Murali – 313-598-6500

ಆತ್ಮೀಯ ಸ್ನೇಹಿತರೆ:

ನಿಮಗೆಲ್ಲರಿಗೂ ತಿಳಿದಿರುವಂತೆ 4000ಕ್ಕೂ ಹೆಚ್ಚು ಕನ್ನಡಿಗರ ಸಹಾಯ, ಪ್ರೋತ್ಸಾಹ ಹಾಗೂ ಅವರ ಸಹಕಾರದಿಂದ 2006ರ ಅಕ್ಕ ಸಂಸ್ಥೆಯ 4ನೇ ವಿಶ್ವ ಕನ್ನಡ ಸಮ್ಮೇಳನವನ್ನು ಕಾವೇರಿ ಕನ್ನಡ ಸಂಘದವರು ಬಹಳ ಅದ್ದೂರಿಯಿಂದ ನಡೆಸಿಕೊಟ್ಟರು. ನೀವೆಲ್ಲರೂ ಆ ಮೂರು ದಿನಗಳಲ್ಲಿ ಕಾವೇರಿ ಸಂಘದ ಸದಸ್ಯರು ನೀಡಿದ ಚಿರಸ್ಮರಣೀಯವಾದ ಆತಿಥ್ಯವನ್ನು ಸವಿದಿರುವ ನೆನಪು ನಿಮ್ಮಲ್ಲಿ ಇನ್ನೂ ಹಸಿರಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯೇನಲ್ಲ.

ಈಗ ನಿಮಗೆಲ್ಲ ತಿಳಿದಿರುವಂತೆ 2008ರಲ್ಲಿ ನಡೆಯಲಿರುವ ಅಕ್ಕ ಸಂಸ್ಥೆಯ 5ನೇ ವಿಶ್ವ ಕನ್ನಡ ಸಮ್ಮೇಳನ ನಡೆಸುವ ಜವಾಬ್ದಾರಿಯನ್ನು ವಿದ್ಯಾರಣ್ಯ ಕನ್ನಡ ಕೂಟಕ್ಕೆ ವಹಿಸಲಾಗಿದೆ. ಎಲ್ಲರಿಗೂ ತಿಳಿದಿರುವಂತೆ ಶಿಕಾಗೊದಲ್ಲಿರುವ ವಿದ್ಯಾರಣ್ಯ ಕೂಟ ಬಹಳ ವರ್ಷಗಳಿಂದಲೂ ಅಸ್ತಿತ್ವದಲ್ಲಿದ್ದು, ಅಮೆರಿಕಾದಲ್ಲಿ ಮೊಟ್ಟ ಮೊದಲಿಗೆ ಪ್ರಾರಂಭವಾದ ಕನ್ನಡ ಕೂಟಗಳಲ್ಲೊಂದಾಗಿದ್ದು, ಪ್ರತಿ ವರ್ಷವೂ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಶಿಕಾಗೊ ನಗರ ಅಮೆರಿಕಾದ 3ನೇ ದೊಡ್ಡ ನಗರ. ಅಲ್ಲದೆ 2016ರಲ್ಲಿ ನಡೆಯಲಿರುವ ವಿಶ್ವ ಒಲಂಪಿಕ್ಸನ್ನು ಅಮೆರಿಕಾದಲ್ಲಿ ನಡೆಸಲು ಅಮೆರಿಕಾದ ಒಲಂಪಿಕ್ಸ್ ಸಮಿತಿ ಶಿಕಾಗೊವನ್ನು ಆಯ್ಕೆಮಾಡಿ ಈಗ 2016ರ ಒಲಂಪಿಕ್ಸನ್ನು ಇಲ್ಲಿಗೆ ತರಲು ಪ್ರಯತ್ನಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಶಿಕಾಗೊದಲ್ಲಿ ಅನೇಕ ರೀತಿಯಲ್ಲಿ ಹೆಸರುವಾಸಿಯಾದ ಪ್ರೇಕ್ಷಣೀಯ ಸ್ಥಳಗಳಿವೆ. ಉದಾಹರಣೆಗೆ – ಸಿಯರ್ಸ್ ಟವರ್, ನೇವಿ ಪಿಯರ್, ಲೇಕ್ ಮಿಶಿಗನ್ ಕ್ರೂಸ್, ವಿವಿಧ ರೀತಿಯ ಪ್ರದರ್ಶನಾಲಯಗಳು (ಮ್ಯೂಸಿಯಂಗಳು), ಪ್ಲಾನಟೇರಿಯಂ, ಅಕ್ವೇರಿಯಮ್, ಇತ್ಯಾದಿ. ಜೊತೆಗೆ ಹೆಸರುವಾಸಿಯಾದ ಅನೇಕ ದೇವಸ್ಥಾನಗಳೂ ಶಿಕಾಗೊ ಪರಿಸರದಲ್ಲಿವೆ. ಆದ್ದರಿಂದ ಈ ಸಮ್ಮೇಳನಕ್ಕೆ ನೀವು ನಿಮ್ಮ ಕುಟುಂಬ ಸಮೇತ ಬಂದು ಇದನ್ನು ಒಂದು ವಾರಾಂತ್ಯದ ವಿರಾಮಕಾಲವಾಗಿ ಉಪಯೋಗಿಸಿಕೊಳ್ಳಬೇಕೆಂದು ನಿಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

ಈ ಸಮ್ಮೇಳನಕ್ಕಾಗಿ ವಿದ್ಯಾರಣ್ಯ ಕನ್ನಡ ಕೂಟ ಈಗಾಗಲೇ ಕಾರ್ಯ ಪ್ರಾರಂಭಿಸಿದೆ. ಈ ಸಮ್ಮೇಳನವು 2008ರ ಆಗಸ್ಟ್ ತಿಂಗಳ 29, 30 ಮತ್ತು 31ರಲ್ಲಿ ರೋಸ್‌ಮಾಂಟ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆ. ರೋಸ್‌ಮಾಂಟ್ ಕನ್ವೆನ್ಷನ್ ಸೆಂಟರ್ ಒಹೇರ್ ವಿಮಾನ ನಿಲ್ದಾಣಕ್ಕೆ ಬಹಳ ಹತ್ತಿರದಲ್ಲಿದೆ. ಅಲ್ಲದೆ ಇಲ್ಲಿ ಊಟದ ವ್ಯವಸ್ಥೆ ಮತ್ತು ಕಾರ್ಯಕ್ರಮಗಳು ಎಲ್ಲ ಒಂದೇ ಕಟ್ಟಡದಲ್ಲಿರುವುದು ಬಹಳ ಸಂತೋಷದ ವಿಷಯ. ಜೊತೆಗೆ ಕೆಲವು ಹೋಟೆಲ್‌ಗಳು ಈ ಕನ್ವೆನ್ಷನ್ ಸೆಂಟರ್ ಹತ್ತಿರದಲ್ಲೇ ಇರುವುದಲ್ಲದೆ ಅಲ್ಲಿಂದ ಸ್ಕೈಬ್ರಿಡ್ಜ್ ಮುಕಾಂತರ ಕನ್ವೆನ್ಷನ್ ಸೆಂಟರ್‌ಗೆ ಬರುವುದಕ್ಕೆ ಬಹಳ ಅನುಕೂಲಕರವಾಗಿದೆ. ಇನ್ನೊಂದು ಬಹು ಮುಖ್ಯ ವಿಶೇಷವೆಂದರೆ ಇಲ್ಲಿ ನಮ್ಮ ಭಾರತೀಯ ತಿಂಡಿ/ಊಟಕ್ಕೆ ತಕ್ಕಂತ ಪದಾರ್ಥಗಳನ್ನು ತಯಾರಿಸಲು ಅನುಮತಿ ಇರುವುದರಿಂದ ನಮ್ಮ ಕರ್ನಾಟಕದ ಅತ್ಯುತ್ತಮ ತಿಂಡಿ/ಊಟದ ವ್ಯವಸ್ಥೆಗೆ ಬಹಳ ಅನುಕೂಲವಾಗುತ್ತದೆ.

ಈ ಹಿಂದೆ ನಡೆದ ಸಮ್ಮೇಳನಗಳಂತೆ ಇಲ್ಲಿಗೂ ಹೆಸರುವಾಸಿಯಾದ ಕಲಾವಿದರು, ಕವಿಗಳು, ಹಾಗೂ ಗಣ್ಯ ವ್ಯಕ್ತಿಗಳನ್ನು ಕರೆಸಲು ಪ್ರಯತ್ನಿಸಲಾಗುವುದು. ಜೊತೆಗೆ ವಿವಿಧ ರೀತಿಯ ವಿಚಾರವೇದಿಕೆಗಳನ್ನು ಏರ್ಪಡಿಸಲಾಗುವುದು. ಅಲ್ಲದೆ ಅತ್ಯುತ್ತಮ ರೀತಿಯಲ್ಲಿ ಕರ್ನಾಟಕದವರಿಗೆ ಇಷ್ಟವಾಗುವಂತಹ ತಿಂಡಿ/ಊಟದ ವ್ಯವಸ್ಥೆ ಮಾಡಲಾಗುವುದು.

ಇನ್ನು ಮುಂದೆ ಸಮ್ಮೇಳನದ ಬಗ್ಗೆ ಹೆಚ್ಚಿನ ವಿವರಗಳನ್ನು ಅಕ್ಕ ಅಂತರ್ಜಾಲದಲ್ಲಿ (www.akkaonline.org) ಪ್ರಕಟಿಸಲಾಗುವುದು. ಎಂದಿನಂತೆ ಮುಂಚಿತವಾಗಿ ನೋಂದಾವಣೆ (ರಿಜಿಸ್ಟರ್) ಮಾಡಿಸಿದವರಿಗೆ ರಿಯಾಯಿತಿ (ಡಿಸ್ಕೌಂಟ್) ಕೊಡಲಾಗುವುದು. ನಾವು ಈ ಮೂಲಕ ನಿಮ್ಮೆಲ್ಲರನ್ನು ತುಂಬು ಮನಸ್ಸಿನಿಂದ ಸಹಾಯ ಮಾಡಿ ಪ್ರೋತ್ಸಾಹಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ. ಈ ಸಮ್ಮೇಳನದಲ್ಲಿ ಭಾಗವಹಿಸುವವರು ಇದರ ಸವಿನೆನಪುಗಳನ್ನು ಅನೇಕ ವರ್ಷಗಳವರೆಗೆ ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವಂತಹ ಒಂದು ವಿಶೇಷ ವಾತಾವರಣ ಕಲ್ಪಿಸಲು ಎಲ್ಲ ರೀತಿಯ ಏರ್ಪಾಡುಗಳನ್ನು ಮಾಡಲು ಪ್ರಯತ್ನಿಸುತ್ತೇವೆ. ವಂದನೆಗಳು.

ನಿಮ್ಮ ನಿಷ್ಠೆಯ,

| | | | |
|---|---|---|---|
| **ರಮೇಶ್ ಗೌಡ** | **ಮೋಕ್ಷಗುಂಡಮ್ ಜಯರಾಮ್** | **ವಾಸಂತಿ ಗೌಡ** | **ಶಿವಮೂರ್ತಿ ಕೀಲಾರ** |
| ಅಕ್ಕ ಅಧ್ಯಕ್ಷರು | ಸಂಚಾಲಕರು | ಸಂಚಾಲಕರು | ಸಂಚಾಲಕರು |

AKKA
63 N. Squirrel Road
Auburn Hills, MI 48326 USA